# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಬೆಂಗಳೂರು(ನಗರ) ಜಿಲ್ಲೆಯ ಗ್ರಾಮಗಳ ಪಟ್ಟಿಗೆ ಅನುಮೋದನೆ ಕುರಿತು.

ಓದಲಾಗಿದೆ: 1.ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:29.06.2012

2.ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:04.07.2012

3.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು (ನಗರ) ಇವರ:ಬೆಂನಜಿಪಂ/ಅಭಿವೃದ್ಧಿ(10)ಸುಗ್ರಾಯೋ/7/2012-13 ದಿ:21.08.2012 ಮತ್ತು ದಿ:28.08.2012

**ಪ್ರಸ್ತಾವನೆ:**

2012-13ನೇ ಸಾಲಿನ ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 5ನೇ ಹಂತದ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ, ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲೆ ಓದಲಾದ (1) ಮತ್ತು (2)ರ ಸರ್ಕಾರದ ಆದೇಶ ಹಾಗೂ ಸುತ್ತೋಲೆಯನ್ನು ಹೊರಡಿಸಲಾಗಿದೆ. ಅದರನ್ವಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು(ನಗರ)ರವರು ನಿಯಮಾನುಸಾರ ಶಾಸಕರ ಶಿಫಾರಸಿನೊಂದಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದಿಸಲ್ಪಟ್ಟ ಆನೇಕಲ್ ತಾಲ್ಲೂಕಿನ 18 ಗ್ರಾಮಗಳು, ಬೆಂಗಳೂರು ಉತ್ತರ ತಾಲ್ಲೂಕಿನ 13 ಗ್ರಾಮಗಳು, ಬೆಂಗಳೂರು ದಕ್ಷಿಣ ತಾಲ್ಲೂಕಿನ 12 ಗ್ರಾಮಗಳು ಮತ್ತು ಬೆಂಗಳೂರು ಪೂರ್ವ ತಾಲ್ಲೂಕಿನ 12 ಗ್ರಾಮಗಳು ಒಟ್ಟು 55 ಗ್ರಾಮಗಳ ಪಟ್ಟಿಯನ್ನು ಅನುಮೋದನೆ ನೀಡಲು ಓದಲಾಗಿದೆ (3) ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ನಿಯಮಗಳನ್ವಯ ಪರಿಶೀಲಿಸಿದ್ದು, ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಹೊರಡಿಸಲು ಸರ್ಕಾರಿ ಆದೇಶದ ಅಗತ್ಯವಿದೆ. ಅನುಬಂಧದಲ್ಲಿರುವ ಆನೇಕಲ್ ತಾಲ್ಲೂಕಿನ 18 ಗ್ರಾಮಗಳು, ಬೆಂಗಳೂರು ಉತ್ತರ ತಾಲ್ಲೂಕಿನ 13 ಗ್ರಾಮಗಳು, ಬೆಂಗಳೂರು ದಕ್ಷಿಣ ತಾಲ್ಲೂಕಿನ 12 ಗ್ರಾಮಗಳು ಮತ್ತು ಬೆಂಗಳೂರು ಪೂರ್ವ ತಾಲ್ಲೂಕಿನ 12 ಗ್ರಾಮಗಳು ಒಟ್ಟು 55 ಗ್ರಾಮಗಳಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:68:ಸುಗ್ರಾಯೋ:2012. ಬೆಂಗಳೂರು, ದಿನಾಂಕ:05.09.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಬೆಂಗಳೂರು (ನಗರ) ಜಿಲ್ಲೆಯ 4 ತಾಲ್ಲೂಕುಗಳ 55 ಗ್ರಾಮಗಳಿಗೆ ಅನುಬಂಧದಲ್ಲಿ ನಮೂದಿಸಿರುವಂತೆ ಸದರಿ ಗ್ರಾಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಓದಲಾಗಿದೆ (1)ರ ಸರ್ಕಾರಿ ಆದೇಶದಲ್ಲಿ ಹಾಗೂ ಓದಲಾಗಿದೆ (2)ರ ಸುತ್ತೋಲೆಯಲ್ಲಿ ಹೊರಡಿಸಲಾದ ಯೋಜನಾ ಮಾರ್ಗಸೂಚಿ ಪ್ರತಿ ಗ್ರಾಮಕ್ಕೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅನುಮೋದನೆ ನೀಡಿ ಕಾರ್ಯಗತಗೊಳಿಸುವುದು.
2. ಸರ್ಕಾರಿ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರಲ್ಲಿ ಸೂಚಿಸಿದ ತಾಲ್ಲೂಕುವಾರು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಕೈಗೊಳ್ಳುವುದು.
3. ಗ್ರಾಮವಾರು ಅನುದಾನವನ್ನು ನಿಗದಿಪಡಿಸುವಾಗ ಗ್ರಾಮದ ಜನಸಂಖ್ಯೆಗನುಗುಣವಾಗಿ ತಲಾನುದಾನ ನಿಯಮಕ್ಕೆ ತಕ್ಕಂತೆ ನಿಗದಿಪಡಿಸಿಕೊಳ್ಳತಕ್ಕದ್ದು.
4. ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-2ರ ವೇಳಾಪಟ್ಟಿಗನುಗುಣವಾಗಿ ಕಾರ್ಯಾನುಷ್ಠಾನ ಮಾಡುವುದು.
5. ಆಯ್ಕೆಯಾದ ಗ್ರಾಮವು ಈ ಯೋಜನೆಯ ಹಿಂದಿನ ಹಂತದಲ್ಲಿ ಆಯ್ಕೆಯಾಗಿಲ್ಲದಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು(ಸು.ಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು(ನಗರ)
2. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಬೆಂಗಳೂರು(ನಗರ)
3. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪ ಮುಖ್ಯ ಮಂತ್ರಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿ ಮತ್ತು ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು(ನಗರ)
6. ಸಂಕಲನಕಾರರು, ರಾಜ್ಯಪತ್ರ, ಬೆಂಗಳೂರು.
7. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
9. ಸಂಪಾದಕರು, ಕರ್ನಾಟಕ ವಿಕಾಸ, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು
10. ಹೆಚ್ಚುವರಿ.

### ಅನುಬಂಧ

### ಬೆಂಗಳೂರು(ನಗರ) ಜಿಲ್ಲೆಯ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆ – ಅನುಮೋದಿಸಿತ ಗ್ರಾಮಗಳ ಪಟ್ಟಿ

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:68:ಸುಗ್ರಾಯೋ:2012 ದಿ:05.09.2012**

ಜಿಲ್ಲೆ: ಬೆಂಗಳೂರು (ನಗರ)

| ಕ್ರಸಂ. | ತಾಲ್ಲೂಕು | ಕ್ರ.ಸ. | ಗ್ರಾಮಗಳ ಹೆಸರು | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ತಾಲ್ಲೂಕುವಾರು ನಿಗದಿಪಡಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | ಆನೇಕಲ್ | 1 | ಹೀಲಲಿಗೆ | 1440 | |
| | | 2 | ಬಳ್ಳೂರು | 3580 | |
| | | 3 | ಹುಸ್ಕೂರು | 2095 | |
| | | 4 | ಮುಗಳೂರು | 1239 | |
| | | 5 | ತಿಗಳಚೌಡದೇನಹಳ್ಳಿ | 1220 | |
| | | 6 | ಬಂಡಾಪುರ | 842 | |
| | | 7 | ಬಳಗಾರನಹಳ್ಳಿ | 2262 | |
| | | 8 | ಅಡಿಗಾರಕಲ್ಲಹಳ್ಳಿ | 2066 | |
| | | 9 | ನೆಕ್ಕುಂದಿ ದೊಮ್ಮಸಂದ್ರ | 586 | |
| | | 10 | ಚಿಕ್ಕ ನೆಕ್ಕುಂದಿ | 836 | |
| | | 11 | ಬೆಸ್ತಮಾನಹಳ್ಳಿ | 716 | |
| | | 12 | ಹಾಲ್ದೇನಹಳ್ಳಿ | 1031 | |
| | | 13 | ಸಬ್ ಮಂಗಲ | 676 | |
| | | 14 | ಮಾರನಾಯಕನಹಳ್ಳಿ | 761 | |
| | | 15 | ಸುರಜಕ್ಕನಹಳ್ಳಿ | 912 | |
| | | 16 | ಚೂಡೇನಹಳ್ಳಿ | 201 | |
| | | 17 | ಜಿಗಣಿ | 7871 | |
| | | 18 | ಶಿಕಾರಿ ಪಾಳ್ಯ | 2515 | |
| | | | ಒಟ್ಟು | **30849** | **691.00** |
| 2 | ಬೆಂಗಳೂರು ಉತ್ತರ | 1 | ರಾಜನಕುಂಟೆ (ಪಾರ್ವತಿಪುರ) | 1800 | |
| | | 2 | ಅದ್ದಿಗಾನಹಳ್ಳಿ (ಜಿ.ಹೆಚ್.ಸಿ) | 1111 | |
| | | 3 | ಮಾರಸಂದ್ರ | 1443 | |
| | | 4 | ನೆಲ್ಲಕುಂಟೆ | 285 | |
| | | 5 | ಸುರದೇನಪುರ | 1464 | |
| | | 6 | ಚಿಕ್ಕಬಿದರಕಲ್ಲು | 5081 | |
| | | 7 | ಶ್ರೀಕಂಠಪುರ | 1907 | |
| | | 8 | ತೋಟದಗುಡ್ಡದಹಳ್ಳಿ | 1703 | |
| | | 9 | ಕಾಡಿಗಾನಹಳ್ಳಿ (ವಿದ್ಯಾನಗರ ಕ್ರಾಸ್) | 5474 | |
| | | 10 | ಹುಣಸಮಾರನಹಳ್ಳಿ | 7380 | |
| | | 11 | ಬಂಡೀಕೊಡಿಗೇಹಳ್ಳಿ ಪಾಳ್ಯ | 1129 | |
| | | 12 | ಲಕ್ಷ್ಮೀಪುರ | 1190 | |
| | | 13 | ಮಂಗನಹಳ್ಳಿ | 618 | |
| | | | ಒಟ್ಟು | **30585** | **639.00** |

| | | | | | |
|---|---|---|---|---|---|
| 3 | ಬೆಂಗಳೂರು ದಕ್ಷಿಣ | 1 | ಸೋಮನಹಳ್ಳಿ | 3455 | |
| | | 2 | ಹೆಚ್.ಗೊಲ್ಲಹಳ್ಳಿ | 873 | |
| | | 3 | ಚೆನ್ನೇನಹಳ್ಳಿ (ಜಟ್ಟಿಪಾಳ್ಯ) | 2134 | |
| | | 4 | ತಗಚಗುಪ್ಪೆ | 1313 | |
| | | 5 | ತಟ್ಟಗುಪ್ಪೆ | 2028 | |
| | | 6 | ದೊಡ್ಡೇರಿ | 1517 | |
| | | 7 | ಊದಿಪಾಳ್ಯ | 986 | |
| | | 8 | ಗೇರುಪಾಳ್ಯ | 924 | |
| | | 9 | ಅಂಚೆಪಾಳ್ಯ | 566 | |
| | | 10 | ರಾಮೋಹಳ್ಳಿ ಜೆ.ಹೆಚ್.ಸಿ | 671 | |
| | | 11 | ಕೇತೋಹಳ್ಳಿ | 792 | |
| | | 12 | ಗೋವಿಂದಶಟ್ಟಿಪಾಳ್ಯ | 3058 | |
| | | | ಒಟ್ಟು | **18317** | **477.00** |
| 4 | ಬೆಂಗಳೂರು ಪೂರ್ವ | 1 | ಕಣ್ಣೂರು | 3454 | |
| | | 2 | ದೊಡ್ಡಗುಬ್ಬಿ | 1861 | |
| | | 3 | ಗುಂಡೂರು | 1199 | |
| | | 4 | ಯರಪ್ಪನಹಳ್ಳಿ | 1066 | |
| | | 5 | ಚೀಮಸಂದ್ರ | 1839 | |
| | | 6 | ವೀರೇನಹಳ್ಳಿ | 1371 | |
| | | 7 | ವಾಲೆಪುರ | 893 | |
| | | 8 | ಕಾಚಮಾರನಹಳ್ಳಿ | 716 | |
| | | 9 | ಹುಸ್ಕೂರು | 1144 | |
| | | 10 | ಕಾಟಂನೆಲ್ಲೂರು | 1192 | |
| | | 11 | ಕಾಜಿಸೊಣ್ಣೇನಹಳ್ಳಿ | 1390 | |
| | | 12 | ಬೊಮ್ಮೇನಹಳ್ಳಿ | 1103 | |
| | | | ಒಟ್ಟು | **17228** | **420.00** |
| | | | ಜಿಲ್ಲೆಯ ಒಟ್ಟು ಮೊತ್ತ | **96979** | **2227.00** |

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ